ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಡ್ರೈವರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಹಾವೇರಿ ನಿವಾಸಿ ಗಂಗಪ್ಪ ಅವರು ಭೂಮಿ ತಂಟೆಯೊಂದರಲ್ಲಿ ಹತಾಶರಾಗಿ ಹೋಗಿದ್ದರು. ಅವರ ಸಮಸ್ಯೆಗೆ ಪರಿಹಾರ ಒದಗಿಸಿಕೊಟ್ಟದ್ದನ್ನು ಗಂಗಪ್ಪ ಅವರು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಆರ್ಥಿಕ ತೊಂದರೆಯಲ್ಲಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವರು ಪ್ರತಿ ತಿಂಗಳು ಎಂ.ಓ. ಮೂಲಕ ಹಣ ಕಳುಹಿಸುತ್ತಿದ್ದರು. ಅಂಥ ವಿದ್ಯಾರ್ಥಿಗಳೆಲ್ಲ ಅದರ ಸದುಪಯೋಗ ಮಾಡಿಕೊಂಡು, ಸರಕಾರಿ ಸೇವೆಗೆ ಸೇರಿ ಈಗ ನಿವೃತ್ತರಾಗಿದ್ದಾರೆ. ಇಂದಿಗೂ ಅವರು ಸಂಜೆ ದೀಪ ಹಚ್ಚುವ ವೇಳೆಯಲ್ಲಿ ಯೋಗಪ್ಪನವರ್ ಸಹಾಯವನ್ನು ಸ್ಮರಿಸುತ್ತಾರೆ.

'ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ' ಕಾದಂಬರಿ ಪ್ರಕಟವಾದಾಗ ಈ ಕಾದಂಬರಿಗೆ ಮುನ್ನುಡಿ ಬರೆದ ಕಾದಂಬರಿಕಾರ ಶಾಂತಿನಾಥ ದೇಸಾಯಿ ಅವರು, 'ಈ ಕಾದಂಬರಿಯ ಮೂಲಕ ಕನ್ನಡ ಕಾದಂಬರಿಯ ಕ್ಷೇತ್ರದಲ್ಲಿ ಒಂದು ಹೊಸ ಪ್ರತಿಭೆ – ಉತ್ತರ ಕರ್ನಾಟಕದ ಒಂದು ಅಸ್ಸಲ್ ಪ್ರತಿಭೆ ಪದಾರ್ಪಣೆ ಮಾಡಲಿದೆ' ಎಂದು ಬರೆದು ಸ್ವಾಗತಿಸಿದರು. ಆ ವೇಳೆಯಲ್ಲಿ ಅವರು ಬೈಲಹೊಂಗಲದಲ್ಲಿ ಸ್ಪೆಷಲ್ ಅಸಿಸ್ಟಂಟ್ ಕಮಿಷನರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅಧಿಕಾರ ಮತ್ತು ಅದರ ಜೊತೆ ಜೊತೆಗೆ ಜೋಡಿಜೀವವಾಗಿ ಬಂದು ವಕ್ಕರಿಸುವ ದರ್ಪ, ಮದ, ಅಹಂಕಾರಗಳು ವ್ಯಕ್ತಿಯೊಬ್ಬನೊಳಗಿನ ಸೃಜನಶೀಲತೆಯನ್ನು ಆಪೋಶನ ಮಾಡುವ ಅಪಾಯವಿರುತ್ತದೆ. ಸರಕಾರಿ ಅಧಿಕಾರಿಯಾದವನನ್ನು ನಿರಂತರವಾಗಿ ನೈತಿಕ ಅಧಃಪತನದ ಕೊಳ್ಳಕ್ಕೆ ತಳ್ಳಲು ತುದಿಗಾಲ ಮೇಲೆ ನಿಂತಿರುತ್ತವೆ. ಈ ಅಪಾಯದ ಅರಿವು ಲೇಖಕ ಯೋಗಪ್ಪನವರ್ ಅವರಿಗೆ ಇತ್ತು. ಬುದ್ಧಿ, ಮನಸ್ಸು, ಆತ್ಮಗಳನ್ನು ಭ್ರಷ್ಟಗೊಳಿಸುವ ವ್ಯವಸ್ಥೆಯ ಒಡಲೊಳಗಿದ್ದೂ ನೆರೆಹೊರೆಯವರ ನೋವುಗಳನ್ನು ಕೇಳಿಸಿಕೊಳ್ಳುವಷ್ಟಾದರೂ ಅಂತಃಕರಣದ ಎಂಟೆನಾವನ್ನು ಭದ್ರವಾಗಿ ಕಾಪಾಡಿಕೊಳ್ಳಲು ಹೆಣಗಾಡುವ ಪಿ.ಎಸ್.ಆಯ್.ನ ಪಾತ್ರವೊಂದು 'ದೇವರ ಹೆಸರಿನಲ್ಲಿ...' ಕಾದಂಬರಿಯಲ್ಲಿದೆ.

ಬರವಣಿಗೆಯಲ್ಲಿ ತೊಡಗಿಕೊಳ್ಳುವ ಲೇಖಕನ ನೈತಿಕ ಬಿಕ್ಕಟ್ಟಿನ ಬಗೆಗೆ ಅವರು ಗಂಭೀರವಾಗಿ ಆಲೋಚಿಸಿದ್ದರು. ಲೇಖಕನೊಬ್ಬ ತನ್ನ ಬರವಣಿಗೆಯಲ್ಲಿ ಪ್ರಾಮಾಣಿಕವಾಗಿರುವುದು ಎಂದರೆ, ತಾನು ನೋಡಿದ ಇಲ್ಲವೆ ತಾನೇ ಎಸಗಿದ ಗುನ್ಹೆಯ ನಿಜವಾದ ಸಾಕ್ಷಿ ಹೇಳುವುದು ಎಂದು ಅವರು ದೃಢವಾಗಿ ನಂಬಿದ್ದರು. ಬರವಣಿಗೆಯು 'ನಿರ್ಗಮಿಸುವವನ (ಸಾಯುವವನ) ಕೊನೆಯ ಕೂಗಿನ ಹಾಗೆ' ಕೇಳಿಸಬೇಕು ಎಂದು ಅವರು ಬಯಸಿದ್ದರು. ಹೀಗಾಗಿ, ಅನಂತರದ ದಿನಗಳಲ್ಲಿ ಅವರು ತಮ್ಮ ಮೊದಲ ಕಾದಂಬರಿಯ ನಾಯಕನ ಅತಿಯಾದ ಆದರ್ಶವಾದ ಹಾಗೂ ಅವಾಸ್ತವವಾದಿ ಕನಸುಗಾರಿಕೆಯ ಮಿತಿಗಳನ್ನು ಮೀರಬಲ್ಲ ಪಾತ್ರಗಳ ಶೋಧದಲ್ಲಿ ತೊಡಗಿದರು. ಬೂದಿಯಿಂದ ಎದ್ದುಬಂದ ಫಿನಿಕ್ಸ್‌ಗಳ ಹಾಗೆ ಇರುವ ಹೊಸ ಹೊಸ ಪಾತ್ರ, ಸನ್ನಿವೇಶಗಳೊಂದಿಗೆ ಬದುಕಿನ ಸರ್ವಮಗ್ಗಲುಗಳ ದರ್ಶನ ಮಾಡಿಸಲು ಪ್ರಯತ್ನಿಸಿದರು. 'ಪ್ರತಿಯೊಂದು ಬರವಣಿಗೆ ಅಪಾಯಗಳ ಮಧ್ಯದ ವಿಮೋಚನೆಯಂತೆ ಕಾಣುತ್ತದೆ. ಕೊಡಲಿಗೆ ಕತ್ತು ಕೊಟ್ಟಾಗಲೇ ಬದುಕಿನ ಅನಂತ ಅರ್ಥ ಸ್ಫುರಿಸುತ್ತದೆ' ಎಂಬ ಅವರ ಹೇಳಿಕೆಯನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದು. ಅವರ 'ಆರಾಮ ಕುರ್ಚಿ ಮತ್ತು ಇತರ ಕತೆಗಳು' ಕಥಾಸಂಕಲನದ 'ಹಾವು', 'ಮುಷ್ಟಿ', 'ಒಡನಾಡಿ' ಕತೆಗಳು ಅಂತಹ ತುರ್ತಿನಲ್ಲಿ ಹುಟ್ಟಿಕೊಂಡಂಥವುಗಳು. ಮಕ್ಕಳ ಮುಗ್ಧ ಲೋಕದ ಕತ್ತಲ ಗವಿಯಲ್ಲಿ ಅಡಗಿ ಕುಳಿತಿರುವ ಕ್ರೌರ್ಯವು ಅಕಾರಣವಾಗಿ ಕೆರಳಿ ಸ್ಫೋಟಗೊಂಡು, ವಿಘ್ನಸಂತೋಷದಲ್ಲಿ ಸಂಭ್ರಮಿಸುವುದನ್ನು ಅವರ 'ಒಡನಾಡಿ' ಕತೆ ಹೇಳುತ್ತದೆ.

ಪುಸ್ತಕ ಓದುವ ಮೋಹವನ್ನು ಅವರು ತಮ್ಮ ಬದುಕಿನ ಉದ್ದಕ್ಕೂ ಉಳಿಸಿಕೊಂಡು ಬಂದರು. ತಮ್ಮ ವೃತ್ತಿಜೀವನದ ಬಹುಭಾಗವನ್ನು ಹಾಗೂ ನಿವೃತ್ತಿಯ ಅನಂತರದ ಬದುಕನ್ನು ಅವರು